Bidar Districts, the salary grants of the aided institutions of these districts have not been released. As a result of this, the teaching and non-teaching staff of the aided institutions of these districts are facing lardships in maintaining the livlihood. Thousands of employees are suffering due to non-release of salary, So far the Government has not taken any action to solve the problems of these employees. Hence, I would like to know what action the Government has proposed to take to release the salary grants of these districts to save the lives of the teachers, in the interest of the students and teachers.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ಈ ವಿಷಯ ಮೂರು ನಾಲ್ಕು ದಿವಸಗಳ ಕೆಳಗೆ ನನಗೆ ಗೊತ್ತಾಯಿತು. ತಕ್ಷಣ ಹಣವನ್ನು ಬಿಡುಗಡೆ ಮಾಡಿ ಹಣವನ್ನು ಕೊಡಿ ಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ.

## XIX ಮೈಸೂರಿಂ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಮುಷ್ಕರ

ಶ್ರೀ ಯು. ಭೂಪತಿ.—ಮೈಸೂರು ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಮುಷ್ಕರ ಸುಮಾರು ಒಂದು ತಿಂಗಳಿನಿಂದ ನಡೆಯುತ್ತಿದೆ. ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳ ಕುರಿತು ಸಂಬಂಧಪಟ್ಟವರು ವಿದ್ಯಾರ್ಥಿಗಳ ಜೊತೆ ಸಂಧಾನ ನಡೆಸಿ ಪರಿಹರಿಸುವ ಪ್ರಯತ್ನ ಮಾಡಿಲ್ಲ ವಾದ್ದರಿಂದ ಮುಷ್ಕರ ಮುಂದುವರೆಯುವುದಕ್ಕೆ ಅವಕಾಶವಾಗಿದೆ. ಸುಮಾರು ೧೫,೦೦೦ ವಿದ್ಯಾರ್ಥಿ ಗಳಿಗೆ ಅನಾನುಕೂಲವಾಗಿದೆ ಮತ್ತು ಆತಂಕವುಂಟಾಗಿದೆ. ಇದರಿಂದ ವಿದ್ಯಾರ್ಥಿಗಳ ಪೋಷಕರಿಗೂ ತೊಂದರೆಯಾಗಿದೆ. ಈ ಮುಷ್ಕರ ಇನ್ನು ಕೆಲವು ದಿನಗಳವರೆಗೆ ಮುಂದುವರೆದರೆ ಮುಂಬರುವ ಪರೀಕ್ಷೆಗಳ ವ್ಯವಸ್ಥೆಯನ್ನು ಬದಲಾಯಿಸಬೇಕಾಗುತ್ತದೆ. ಇದರಿಂದ ಮತ್ತೆ ಅನಾನುಕೂಲಗಳು ಹೆಚ್ಚಾಗುವ ಸಂಭವವಿದೆ. ಆದಕಾರಣ ತಕ್ಷಣ ಸರಕಾರ ಮಧ್ಯೆ ಪ್ರವೇಶಿಸಿ ಸಧ್ಯ ಉಂಟಾಗಿರುವ ಗೊಂದಲಮಯ ಪರಿಸ್ಥಿತಿಯನ್ನು ಸರಿಪಡಿಸಬೇಕೆಂದು ಸಾರ್ವಜನಿಕ ಹಿತದೃಷ್ಟಿಯಿಂದ ಮಹತ್ವವುಳ್ಳ ಈ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮುಷ್ಕರವಾದುದು ನಿಜ. ಇದನ್ನು ನೋಡಿ ನಾವು ವೈಸ್‌ಚಾನ್ಸಲರ್‌ರವರ ಜೊತೆಯಲ್ಲಿ ಮಾತನಾಡಿದ್ದೇವೆ. ಅವರು ೧೮ನೇ ತಾರೀಖು ನಡೆಯುವ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಈ ವಿಚಾರವನ್ನು ತೀರ್ಮಾನ ಮಾಡು ತ್ತೇವೆಂದು ಹೇಳಿದ್ದರು. ಇದು ಅಕಾಡೆಮಿಕ್ ಮ್ಯಾಟರ್ ಆಗಿರುವುದರಿಂದ ಯೂನಿವರ್ಸಿಟಿ ಇತ್ಯರ್ಥ ಮಾಡಬೇಕಾಗಿದೆ. ಬಹುತೇಕ ೧೮ನೇ ತಾರೀಖು ಏನು ತೀರ್ಮಾನ ಮಾಡಿದ್ದಾರೋ ಅದು ನಮಗೆ ಗೊತ್ತಿಲ್ಲ, ಮತ್ತೆ ಇನ್ನೊಂದುಸಾರಿ ಅವರ ಜೊತೆಯಲ್ಲಿ ಮಾತನಾಡಿ ಆದಷ್ಟು ಜಾಗ್ರತೆ ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ವೇದಾಂತ ಹೆಮ್ಮಿಗೆ (ಮಾನ್ಯ ಸದಸ್ಯರು ಗೈರುಹಾಜರಿ)

ಅಧ್ಯಕ್ಷರು. —ಈಗ ಶಾಸನಗಳ ರಚನೆ, ವಿಧೇಯಕಗಳನ್ನು ಮಂಡಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ೩೫ಳರ ಕೆಳಗೆ ಬೆಂಗಳೂರು ಲಾಲ್‌ಬಾಗ್ ಬಗ್ಗೆ ನೋಟೀಸ್ ಕಳುಹಿಸಿಕೊಟ್ಟಿದ್ದೆ. ಮಾನ್ಯ ಸಚಿವರು ಅದಕ್ಕೆ ನಿನ್ನೆ ಇಂದು ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು. ಮಾನ್ಯ ಸಚಿವರು ಇದ್ದಾರೆ, ಅದಕ್ಕೆ ಉತ್ತರವನ್ನು ಕೊಡುತ್ತಾರೆಯೇ ಸಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ನಾಳೆ ಇದಕ್ಕೆ ಉತ್ತರ ಕೊಡುತ್ತೇನೆ. ಈಗಾಗಲೇ ಇದಕ್ಕೆ ಸಂಬಂಧ ಪಟ್ಟ ಫೈಲನ್ನು ಕಳುಹಿಸಿಬಿಟ್ಟಿದ್ದೇನೆ. ಬೆಳಿಗ್ಗೆ ಉತ್ತರವನ್ನು ಕೊಡಬೇಕೆಂದೆ ಬಂದಿದ್ದೆ.

ಅಧ್ಯಕ್ಷರು.—ಮಾನ್ಯ ಸಚಿವರು ನಾಳೆಯ ದಿವಸ ಉತ್ತರವನ್ನು ಕೊಡುತ್ತಾರೆಂದು ಮಾನ ಸದಸ್ಯರಿಗೆ ತಿಳಿಸಬಯಸುತ್ತೇನೆ.